ಬಡ್ಡಿರಹಿತ ಅಲ್ಪಾವಧಿ ಸಾಲ, ಮೂರು ಲಕ್ಷ ರೂ ನಿಂದ ಹತ್ತು ಲಕ್ಷ ರೂ ವರೆಗೆ ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲ ವಿತರಿಸುತ್ತಿದೆ. ಕೃಷಿ ಯಂತ್ರೋಪಕರಣಗಳನ್ನು ಅತ್ಯಲ್ಪ ದರದಲ್ಲಿ ಬಾಡಿಗೆಗೆ ನೀಡುವ ಕೃಷಿ ಯಂತ್ರಧಾರೆ ಯೋಜನೆ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವ ಬಡ ರೈತರಿಗೆ ಸಹಕಾರಿಯಾಗಿದೆ.

ಮಣ್ಣಿನ ಆರೋಗ್ಯ ಕಾಪಾಡಿಕೊಂಡು ಬೆಳೆಯ ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸಲು ಖುಷ್ಕಿ ಪ್ರದೇಶದ ರೈತರಿಗಾಗಿ ರೂಪಿಸಿರುವ ಭೂ ಚೇತನ, ಮಳೆಯಾಶ್ರಿತ ರೈತರ ಹಿತದೃಷ್ಟಿ ಕಾಯ್ದುಕೊಳ್ಳಲು ರೂಪಿಸಿರುವ ಕೃಷಿಭಾಗ್ಯ ಹಾಗೂ ಸಾವಯವ ಕೃಷಿ ಪದ್ಧತಿಯನ್ನು ಪ್ರೋತ್ಸಾಹಿಸಲು ರೂಪಿಸಿರುವ ಸಾವಯವ ಭಾಗ್ಯ ಯೋಜನೆಗಳು ರೈತರ ಬದುಕನ್ನು ಹಸನಾಗಿಸುವಲ್ಲಿ ಸಫಲವಾಗಿವೆ.

ಕರ್ನಾಟಕ ಲೇವಾದೇವಿ ಅಧಿನಿಯಮ ೧೯೬೧, ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ ೨೦೦೪ ರ ಪ್ರಕಾರ ಸಾಲಪಡೆದ ರೈತರ ಹಿತ ಕಾಪಾಡಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ಜರುಗಿಸಿದೆ.

ಈ ಅಧಿನಿಯಮದ ಪ್ರಕಾರ ಭದ್ರತೆ ನೀಡಿರುವ ಸಾಲಗಳಿಗೆ ಗರಿಷ್ಠ ವಾರ್ಷಿಕ ಶೇಕಡಾ ೧೪ ಬಡ್ಡಿಯನ್ನು ಹಾಗೂ ಭದ್ರತೆರಹಿತ ಸಾಲಗಳಿಗೆ ಗರಿಷ್ಠ ವಾರ್ಷಿಕ ಶೇಕಡಾ ೧೬ ಬಡ್ಡಿಯನ್ನು ಮಾತ್ರ ವಿಧಿಸಲು ಅವಕಾಶವಿದೆ. ಅಧೀರರಾಗಿ ಆತ್ಮಹತ್ಯೆಗೆ ಶರಣಾದ ರೈತರ ಸಂತ್ರಸ್ತ ಕುಟುಂಬಗಳಿಗೆ ಐದು ಲಕ್ಷ ರೂ ಮಾನವೀಯ ನೆರವು, ಮೃತ ರೈತನ ಪತ್ನಿಗೆ ಎರಡು ಸಾವಿರ ರೂ ಮಾಸಾಶನ ಹಾಗೂ ಆತನ ಮಕ್ಕಳಿಗೆ ಸ್ನಾತಕೋತ್ತರ ಪದವಿಯವರೆಗೂ ಉಚಿತ ಶಿಕ್ಷಣ ಘೋಷಿಸಿ ನೆರವಿಗೆ ಧಾವಿಸಿದ ಸಿದ್ದರಾಮಯ್ಯ ಸರ್ಕಾರವು ರೈತರಲ್ಲಿ ಆತ್ಮಸ್ಥೈರ್ಯ ತುಂಬಿದೆ ಎಂಬುದು ಗಮನಾರ್ಹ ಅಂಶ.

## ಕೇವಲ ಭರವಸೆಗಳಲ್ಲ !

ಸಿದ್ದರಾಮಯ್ಯ ಸರ್ಕಾರ ಅಸ್ತಿತ್ವಕ್ಕೆ ಬಂದ ಮೊದಲನೇ ದಿನವೇ ಚುನಾವಣಾ ಪೂರ್ವದಲ್ಲಿ ಪ್ರಕಟಿಸಿದ್ದ ಪಕ್ಷದ ಪ್ರಣಾಳಿಕೆಯಲ್ಲಿನ ೧೬೫ ಭರವಸೆಗಳಲ್ಲಿ ರಾಜ್ಯದ ಒಂದು ಕೋಟಿಗೂ ಹೆಚ್ಚು ಕುಟುಂಬಗಳಿಗೆ ಅನುಕೂಲವಾಗುವ ಅನ್ನಭಾಗ್ಯ, ಅಂಗನವಾಡಿ ಮಕ್ಕಳೂ ಒಳಗೊಂಡಂತೆ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಒಂದು ಕೋಟಿಗೂ ಹೆಚ್ಚು ಮಕ್ಕಳಿಗೆ ಕ್ಷೀರಭಾಗ್ಯ, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಹಾಗೂ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮಕ್ಕಳ ವಸತಿ ಹಾಗೂ ಭೋಜನ ಸಹಾಯ ಯೋಜನೆ, ವಿದ್ಯಾಸಿರಿ, ಸ್ವಯಂ ಉದ್ಯೋಗ ಯೋಜನೆಗಳ ಅಡಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತ ವರ್ಗದವರು ಪಡೆದ ಸಾಲ ಮನ್ನಾ ಋಣಮುಕ್ತ ಭಾಗ್ಯ, ಮನೆ ನಿರ್ಮಾಣಕ್ಕೆ ಸಹಾಯ ಧನ ಒದಗಿಸುವ ವಸತಿ ಭಾಗ್ಯ ಸೇರಿದಂತೆ ೧೦೦ ಭರವಸೆಗಳನ್ನು ಈಡೇರಿಸಿ ನುಡಿದಂತೆ ನಡೆದಿದ್ದೇವೆ.



## ಸ್ವಾವಲಂಬನೆಗೆ ಸಹಕಾರಿಯಾದ ಪ್ರೋತ್ಸಾಹ ಧನ

ಕೋಲಾರ ಜಿಲ್ಲೆಯ ಅಂದ್ರಹಳ್ಳಿ, ಮುಳಬಾಗಲು ತಾಲ್ಲೂಕಿನ ಹಳ್ಳಿ ಭೀಮಾಪುರದ ಮಹಿಳೆಯರು ಕ್ಷೀರೋದ್ಯಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ರೀತಿ ಮೆಚ್ಚುಗೆ ಮೂಡಿಸುತ್ತದೆ. ಭೀಮಾಪುರದ ಶಾರದಮ್ಮ ಹೇಳುವ ಹಾಗೆ, 'ಈ ಮುಂಚೆ ನಮ್ಮೂರಿಂದ ಡೈರಿಗೆ ಬರೀ ಎರಡು ಕ್ಯಾನ್ ಹೋಗುತ್ತಿತ್ತು. ಈಗ ಏಳು ಕ್ಯಾನ್ ಹೋಗುತ್ತೆ. ನಂದಿನಿ ಮಹಿಳಾ ಡೈರಿಯನ್ನು ನಮ್ಮ ಹಳ್ಳಿಯಲ್ಲಿ ಶುರು ಮಾಡಿದ ಮೇಲೆ ನಾವು ಹಳ್ಳಿಯ ಮಹಿಳೆಯರು ಅದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೇವೆ. ನಾನು ಕಾಸಿಗೆ ಕಾಸು ಕೂಡಿ ಹಾಕಿ ಹಸು ತೆಗೆದುಕೊಂಡಿದ್ದು, ಆಮೇಲೆ ಸರ್ಕಾರ ಪ್ರೋತ್ಸಾಹ ಧನ ಕೊಡಲು ಶುರು ಮಾಡಿದ ನಂತರ ಮತ್ತೆ ಕಾಸಿಗೆ ಕಾಸು ಕೂಡಿಟ್ಟು ಇನ್ನೊಂದು ಹಸು ಕೊಳ್ಳುವಂತಾಯಿತು. ವ್ಯವಸಾಯದೊಂದಿಗೆ ಈ ಹಾಲೋದ್ಯಮ ನನಗೊಂದು ತೃಪ್ತಿಕರ ಬದುಕು ನೀಡಿದೆ. ನಾನು, ನನ್ನ ಗಂಡ, ಎರಡು ಮಕ್ಕಳು ನೆಮ್ಮದಿಯ ಜೀವನ ನಡೆಸುತ್ತಿದ್ದೇವೆ.'

ಇದೇ ಹಳ್ಳಿಯ ಚೌಡಮ್ಮನಿಗೂ ತಮ್ಮ ಕಾಯಕದ ಬಗ್ಗೆ ಹಾಗೂ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಧನದ ಬಗ್ಗೆ ಬಹಳ ಸಂತಸ. "ಡೈರಿಗೆ ಹಾಲು ಹಾಕೋಕೆ ಶುರು ಮಾಡಿದ್ದೇ ನಮಗೆಲ್ಲ ಒಂದು ನೆಲೆ ಸಿಕ್ಕಿದೆ. ಸ್ವಾವಲಂಬನೆಗೆ ಮಹಿಳಾ ಡೈರಿ ಆಸರೆಯಾಗಿದೆ. ಪ್ರೋತ್ಸಾಹ ಧನ ನಿಜಕ್ಕೂ ನಮಗೆ ಒಳ್ಳೆಯ ಬದುಕು ಸಾಗಿಸಲು ಪ್ರೋತ್ಸಾಹ ನೀಡುತ್ತಿದೆ. ಹಾಲಿನ ಹಣ ನೇರ ನಮ್ಮ ಬ್ಯಾಂಕ್ ಅಕೌಂಟಿಗೆ ಹೋಗುವುದರಿಂದ ಎಷ್ಟೋ ಸಹಾಯವಾಗುತ್ತದೆ. ಹಾಲೋದ್ಯಮ ಶುರು ಮಾಡಿದ ಮೇಲೆ ನನಗೆ ನನ್ನದೇ ಆದ ಸ್ವಂತ ಗೂಡು ಕಟ್ಟಿಕೊಳ್ಳಲು ಸಾಧ್ಯವಾಯಿತು'' ಎನ್ನುತ್ತಾರೆ.

ಕೋಲಾರ ಜಿಲ್ಲೆಯ ಅಂದ್ರಹಳ್ಳಿಯ ಕೋಮಲಾ ಬಳಿ ಮೊದಲು ಒಂದೇ ಹಸು ಇತ್ತು. ಸರ್ಕಾರ ಹಾಲಿಗೆ ನೀಡುವ ಪ್ರೋತ್ಸಾಹ ಧನ ಹೆಚ್ಚು ಮಾಡಿದ್ದೇ ಈಕೆಗೆ ಮತ್ತೂ ಒಂದು ಹಸುವನ್ನು ಕೊಳ್ಳುವ ಛಲ ಮೂಡಿತು. ಯಾರ ನೆರವೂ ಇಲ್ಲದೆ, ಚೀಟಿ ಹಾಕಿ ಹಣ ಹೊಂದಿಸಿ ಈಗ ಎರಡು ಹಸುಗಳ ಒಡತಿಯಾಗಿದ್ದಾರೆ. ಈಕೆಯಲ್ಲಿರುವ ಛಲ, ಸ್ವಾವಲಂಬನೆಯ ತೃಪ್ತಿ ಸಂತೋಷ ಮೂಡಿಸುತ್ತದೆ. ಮುಂದಿನ ವರ್ಷಗಳಲ್ಲಿ ಇನ್ನಷ್ಟು ಹಸುಗಳನ್ನು ಖರೀದಿಸುವ ಬಯಕೆ ಈಕೆಯದು. ಈಕೆಯ ಪುಟ್ಟಗ್ರಾಮದಿಂದ ಸುಮಾರು ೪೦೦ರಿಂದ ೪೫೦ ಲೀಟರ್ ಹಾಲು ಡೈರಿ ಸೇರುತ್ತದೆ.